# ಆಧುನಿಕ ಯಂತ್ರ ಯುಗದಲ್ಲಿ ಜೀವನ ಸೌಖ್ಯ

ಜಿ.ಟಿ.ನಾರಾಯಣ ರಾವ್

## ನಾಗರಿಕತೆಯ ಮುನ್ನಡೆ

ಮನುಕುಲದ ಸಮಸ್ತ ಕ್ರಿಯಾಕಲಾಪಗಳ ಮೂಲಪ್ರೇರಣೆಗಳು ಎರಡು: ಹಸಿವಿನ ಉಪಶಮನ ಮತ್ತು ವೇದನೆಯ ನಿವಾರಣೆ. ಅರ್ಥಾತ್ ಅಶನ, ವಸನ ಮತ್ತು ವಸತಿಗಳ ಗಳಿಕೆ. ಈ ದಿಶೆಯಲ್ಲಿ ನಾಗರಿಕತೆ ಮುನ್ನಡೆದಂತೆ ಸಮಾಜದಲ್ಲಿ ಶಾಂತಿ ಕಾಪಾಡುವ ಸಲುವಾಗಿ ಮೂರು ಮುಖ್ಯ ಮಾನವಕೃತ (ನಿಸರ್ಗ ಜನ್ಯವಲ್ಲ ಎನ್ನುವ ಅರ್ಥದಲ್ಲಿ) ಪ್ರಭಾವಗಳು ಮೈದಳೆದು ಕ್ರಮೇಣ ಅವು ಪ್ರತ್ಯೇಕ ಸಂಸ್ಥೆಗಳೇ ಆದುವು: ಧರ್ಮ (religion), ಪ್ರಭುತ್ವ (authority) ಮತ್ತು ವಿಜ್ಞಾನ (science).

**ಧರ್ಮ:** ಮಾನವಮತಿ ವಿಶ್ವದ ಅಸೀಮ ವೈವಿಧ್ಯದ ಜೊತೆ ಸಂಪರ್ಯೋಗದಲ್ಲಿರುವಾಗ ಆತನಲ್ಲಿ ಮಿನುಗುವ ಭಾವವೇ ಧರ್ಮದ ಮೂಲ. ಡಿವಿಜಿಯವರ ಅಮರವಾಣಿಯಲ್ಲಿ –

ಬಾನಾಚೆಯಿಂ ವಿಶ್ವ ಸತ್ತ್ವ ತಾನಿಳಿದಿಳೆಗೆ
ನಾನೆನುವ ಚೇತನದಿ ರೂಪಗೊಂಡಿಹುದೊ?
ನಾನೆನುವ ಕೇಂದ್ರದಿನೆ ಹೊರಟ ಸತ್ತ್ವದ ಪರಿಧಿ
ಬಾನಾಚೆ ಹಬ್ಬಿಹುದೊ? ಮಂಕುತಿಮ್ಮ

ಈ ಭಾವವನ್ನು ಬ್ರಹ್ಮಾಂಡೀಯ ಧಾರ್ಮಿಕ ಸಂವೇದನೆ (cosmic religious feeling) ಎನ್ನುತ್ತೇವೆ. ಇದರ ಉಪೋತ್ಪನ್ನಗಳಾಗಿ ದೇವರು, ಮತ, ವಿವಿಧ ಧಾರ್ಮಿಕ ಗ್ರಂಥಗಳು, ಪಂಥಗಳು ಮುಂತಾದವೂ ತದಂಗವಾದ ಆಚರಣೆಗಳೂ ಮೈದಳೆದುವು. ಇವೆಲ್ಲವೂ ಆಯಾ ವ್ಯಕ್ತಿಯ ನಂಬಿಕೆಯನ್ನು ಆಧರಿಸಿವೆ. ಎಂದರೆ, ಜ್ಞಾತೃನಿಷ್ಠ (=ವ್ಯಕ್ತಿನಿಷ್ಠ, subjective).

**ಪ್ರಭುತ್ವ:** ಸಮಾಜ ಬೆಳೆದಂತೆ ಅದರಲ್ಲಿ ಸುವ್ಯವಸ್ಥೆ ಕಾಪಾಡುವುದು ಅವಶ್ಯವೆನ್ನಿಸಿತು. ಹೀಗೆ ಪ್ರಭುತ್ವ ರೂಪಗೊಂಡಿತು. ರಾಜ, ನಾಯಕ, ಸರ್ಕಾರ, ಸಂವಿಧಾನ, ನಡವಳಿಕೆ ಮೊದಲಾದವು ಇದರ ಉಪೋತ್ಪನ್ನಗಳು. ಇವುಗಳ ಮೊತ್ತವೇ ನಾಗರಿಕತೆ. ಇದು ಕೂಡ ಜ್ಞಾತೃನಿಷ್ಠ.

**ವಿಜ್ಞಾನ ಮತ್ತು ತಂತ್ರವಿದ್ಯೆ:** ಇತ್ತ ವ್ಯಕ್ತಿಯ ಹೊಟ್ಟೆಪಾಡಿಗೆ ಆತ ನಿಸರ್ಗದ ಜೊತೆ ಹೆಣಗಾಡುವುದು ಅನಿವಾರ್ಯವಾಯಿತು. ಇಲ್ಲಿ ಕಾರ್ಯ–ಕಾರಣ ಸಂಬಂಧವೊಂದೇ ಸಾಧು, ಪ್ರಾರ್ಥನೆ ಪೂಜೆಗಳಲ್ಲ, ಅಧಿಕಾರ ದರ್ಪಗಳೂ ಅಲ್ಲ ಎಂಬ ತಥ್ಯ ಆತನ ಅರಿವಿಗೆ ಬಂತು. ನಂಬಿಕೆಗೆ ಇಲ್ಲಿ ಪಾತ್ರವಿಲ್ಲ, ಬದಲು, ನಿಸರ್ಗ ಮೋಸಮಾಡುವುದಿಲ್ಲ, ಅದರದೇ ಕ್ರಮದಲ್ಲಿ ಮಾನವನ ಇಚ್ಛಾನಿಚ್ಛೆಗಳನ್ನು ಪರಿಗಣಿಸದೆ ವರ್ತಿಸುತ್ತದೆ. ನಿಸರ್ಗದ ಬಗೆಗಿನ ಶ್ರದ್ಧೆ ಅಥವಾ ವಿಶ್ವಾಸ(faith) ಇದು. ಶ್ರದ್ಧೆಯೂ ಒಂದು ಬಗೆಯ ನಂಬಿಕೆ ನಿಜ, ಆದರೆ ಇದು ಜ್ಞಾತೃನಿಷ್ಠವಲ್ಲ, ಬದಲು, ಜ್ಞೇಯನಿಷ್ಠ (=ವಸ್ತುನಿಷ್ಠ, objective). ಇದೇ ಧಾಟಿಯಲ್ಲಿ ಮುನ್ನಡೆದಂತೆ ಆತನೊಳಗೆ ವಿಜ್ಞಾನದ ಬೆಳಕು ಮಿನುಗಿತು. ಮಾನವನ ಕುತೂಹಲಾವಿಷ್ಟ ಧೀಶಕ್ತಿ ನಿಸರ್ಗದ ಜೊತೆ ಕಾರ್ಯ–ಕಾರಣ ಪಾತಳಿಯಲ್ಲಿ ವರ್ತಿಸುವಾಗ ಆತನಲ್ಲಿ ಮಿನುಗುವ ಅರಿವೇ ವಿಜ್ಞಾನ. ಇದನ್ನು ನಿಸರ್ಗಲಭ್ಯ ಪದಾರ್ಥಗಳಿಗೆ ಅನ್ವಯಿಸಿ ಹಲವಾರು ಜೀವನೋಪಯುಕ್ತ ಸಲಕರಣೆಗಳನ್ನು ನಿರ್ಮಿಸಲು ಆತ ಶಕ್ತನಾದ. ಇದರಿಂದ ಒದಗಿದ ನೂತನ ಒಳನೋಟಕ್ಕೆ ತಂತ್ರವಿದ್ಯೆ (technology) ಎಂದು ಹೆಸರು. ಘರ್ಷಣೆಯಿಂದ ಶಾಖೋತ್ಪತ್ತಿಯಾಗುವುದು ಎಂದು ತಿಳಿದಾಗ ವಿಜ್ಞಾನವೂ ಚೆಣಚುಕಲ್ಲುಗಳನ್ನು ಪರಸ್ಪರ ರಭಸವಾಗಿ ಉಜ್ಜಿ ಬೆಂಕಿ ಮಾಡುವುದನ್ನು ಶೋಧಿಸಿದಾಗ ತಂತ್ರವಿದ್ಯೆಯೂ ಜನಿಸಿದುವು ಎನ್ನುವುದುಂಟು.

## ನಾಗರಿಕತೆ ಸಂಸ್ಕೃತಿಯಾಗಿ ಏಕೆ ಅರಳಲಿಲ್ಲ?


ಸೂತ್ರರೂಪದಲ್ಲಿ ಬಾನಿನಿಂದ ಧರ್ಮ, ಸಮಾಜದಿಂದ ಪ್ರಭುತ್ವ ಮತ್ತು ಮಣ್ಣಿನಿಂದ ವಿಜ್ಞಾನ ಚಿಗುರಿದುವು. ಇವೆಲ್ಲವುಗಳ ಮೂಲೋದ್ದೇಶ ಬದುಕಿನಲ್ಲಿ ನೆಮ್ಮದಿಯ ಗಳಿಕೆ. ಆದರೆ ಇತಿಹಾಸಪೂರ್ವ ದಿನಗಳಿಂದ ವರ್ತಮಾನ ಯುಗದ ತನಕ ನಾಗರಿಕತೆ ಹಿಡಿದಿರುವ ಜಾಡನ್ನು ಸರ್ವೇಕ್ಷಿಸಿದಾಗ ಕಾಣುವುದೇನು? ಸರ್ವನಾಶದತ್ತ ನಾವು ತ್ವರಿತಗತಿಯಿಂದ ಧಾವಿಸುತ್ತಿರುವೆವೋ ಎಂಬ ಹತಾಶ ದೃಶ್ಯ. ಆದಿಮ ಜನಾಂಗಗಳ ಜೀವನ ಶ್ರುತಿಯೇ ಆಗಿದ್ದ ಸಂಸ್ಕೃತಿ ನಮ್ಮಿಂದ ದೂರ ಸರಿದಿದೆ.

ಕೊಟ್ಟದ್ದು ಬೆಳೆಯುವುದು, ಇಟ್ಟದ್ದು ಕೊಳೆಯುವುದು
ನೆಟ್ಟದ್ದು ಚಿಗುರುವುದು, ಕಡಿದದ್ದು ಕಮರುವುದು
ಬಿಟ್ಟದ್ದು ಹಾರುವುದು, ಕಟ್ಟಿದ್ದು ನವೆಯುವುದು
ಕೊಟ್ಟು ಕೆಟ್ಟವರಿಲ್ಲವೋ ಜಗದಿ ಅತ್ರಿಸೂನು॥

ಇದು ಪ್ರಾಚೀನ ಸಂಸ್ಕೃತಿಗಳ ಜೀವನಧರ್ಮ. ಇಂದು? ಹೀಗೇಕೆ?

ಸಂಸ್ಕೃತಿ ಎಂದರೇನು? ಸಂಸ್ಕಾರದಿಂದ ಲಭಿಸುವ ಬುದ್ಧಿ ಶ್ರೀಮಂತಿಕೆ ಅದು. ವ್ಯಕ್ತಿಯ ವರ್ತನೆಯಲ್ಲಿ ತಂತಾನೇ ಸೂಸುವ ಹೃದಯಸೌಗಂಧ್ಯವದು. ಸಭ್ಯತೆ, ಶಿಷ್ಟಾಚಾರಗಳ ಮೊತ್ತವೇ ಸಂಸ್ಕೃತಿ. 'ರಾಮನಂತೆ ನಡೆ, ಕೃಷ್ಣನಂತೆ ನುಡಿ' ಎನ್ನುವ ನಾಣ್ನುಡಿಯ ಅರ್ಥವಿದು, ಸಭ್ಯ ಸುಸಂಸ್ಕೃತನಾಗಿ ಬಾಳು. ಡಿ.ವಿ.ಜಿಯವರು 'ಸಂಸ್ಕೃತಿ' ಕೃತಿಯಲ್ಲಿ ಈ ಪದಕ್ಕೆ ಬರೆದಿರುವ ವ್ಯಾಖ್ಯಾನ ಮನನೀಯವಾಗಿದೆ, '... ಸಂಸ್ಕೃತಿಯಲ್ಲಿ ಜೀವನ ಸಂದರ್ಭಗಳ ಯುಕ್ತಾಯುಕ್ತ ವಿವೇಚನೆ ಒಂದು ಅಂಶ; ವಸ್ತುಗಳ ಮೂಲ್ಯ ತಾರತಮ್ಯಗಣನೆ ಇನ್ನೊಂದಂಶ; ಪರೇಂಗಿತ ಪರಿಜ್ಞಾನ ಮತ್ತೊಂದು ಅಂಶ; ಸರಸತಾಭಿರುಚಿ ಮತ್ತೊಂದು ಅಂಶ; ಧರ್ಮಚಿಂತನೆಯ ಜಾಗರೂಕತೆ ಮತ್ತೊಂದಂಶ. ಹೀಗೆ ನಾನಾ ವಿಜ್ಞಾನ ನಾನಾ ವಿವೇಕಗಳ ಸಮಾವೇಶದ ಫಲಿತಾಂಶ ಸಂಸ್ಕೃತಿ.'

ಸಂಸ್ಕೃತಿಯ ಮೂರ್ತರೂಪರಾಗಿದ್ದ ಗಾಂಧೀಜಿಯವರ ಪ್ರಯೋಗಜನ್ಯ ನುಡಿ, 'ಮಾನವನ ಸಮಸ್ತ ಅಗತ್ಯಗಳನ್ನೂ ಈ ಸುಂದರ ವಸುಂಧರೆ ಭರಿಸ ಬಲ್ಲದು, ಆದರೆ ಎಂದೂ ಆತನ ದುರಾಶೆಯನ್ನಲ್ಲ.' ಈ ತತ್ತ್ವಾನುಸಾರ ಬಾಳುವಾತನೇ ಸುಸಂಸ್ಕೃತ ವ್ಯಕ್ತಿ. ಮಾನವ ವ್ಯಕ್ತಿತ್ವದ ಒಂದು ಪ್ರಧಾನ ರೇಖೆ ಎಷ್ಟು ದೊರೆತರೂ ಇನ್ನಷ್ಟು ಬೇಕೆಂಬಾಸೆ. ಬಯಕೆ, ಹಂಬಲ, ಆಸೆ, ಆಕಾಂಕ್ಷೆ ಮುಂತಾದ ಭಾವನೆಗಳು ಮತ್ತು ಇವುಗಳ ಈಡೇರಿಕೆಗಾಗಿ ಚಡಪಡಿಕೆ, ಪ್ರಯತ್ನ, ಪೈಪೋಟಿ, ಹೋರಾಟ ಎಲ್ಲವೂ ಸ್ವಾಭಾವಿಕ ಎಂದು ಇವನ್ನು ತಳ್ಳಿಹಾಕುವ ಅಥವಾ ಇವುಗಳ ಬಗ್ಗೆ ಉದಾಸೀನಭಾವ ತಳೆಯುವ ಪ್ರವೃತ್ತಿ ಮಾತ್ರ ಒಳಿತಲ್ಲ, ಸರ್ವಘಾತಕ ಕೂಡ.



ಆಸೆಯೇ ಸಕಲ ದುಃಖದ ಮೂಲ ಎಂದು ಎಂದೋ ನಮ್ಮ ದ್ರಷ್ಟಾರರು ನುಡಿದಿದ್ದಾರೆ. ಸೀತೆಯನ್ನು ಆಸೆಪಟ್ಟ ರಾವಣ ನೇನಾದ? ಕಳಿಂಗಯುದ್ಧಕ್ಕೆ ದುಮುಕಿದ ಅಶೋಕನ ಅನುಭವ ವೇನು? ಇರಾಕಿನ ಮೇಲೆ ದಾಳಿ ಹೂಡಿದ ಬಲಿಷ್ಠ ರಾಷ್ಟ್ರ ಅಮೆರಿಕ ಈಗ ಎದುರಿಸುತ್ತಿರುವ ಪರಿಸ್ಥಿತಿ ಹೇಗಿದೆ? ಇವೆಲ್ಲವುಗಳ ಅರ್ಥ ಒಂದೇ: ಆಸೆ ಸರಿ, ಆದರೆ ಅದಕ್ಕೆ ವಿವೇಕದ ಕಡಿವಾಣ ತೊಡಿಸಲೇ ಬೇಕು. ಹೇಗೆ? ಯಾರು?

### ಅನುಭೋಗಾತಿರೇಕತ್ವ

ಮಾನವನ ಪ್ರವೃತ್ತಿ ವಿವೇಕದ ಋಜುಪಥಕ್ಕಿಂತ ಕ್ಷಿಪ್ರ ಯಶಸ್ಸಿನ ಸುಲಭಮಾರ್ಗದತ್ತ ಹೊರಳುವುದೇ ಸಾಧಾರಣ ನಿಯಮ, ಅಂದರೆ ಆತನಿಗೆ ನಾಗರಿಕತೆಯ ಸುಲಭಲಭ್ಯ ಫಲ ಬೇಕು, ಆದರೆ ಸಂಸ್ಕೃತಿಯ ಕಷ್ಟಾರ್ಜಿತ ಸಂತೃಪ್ತಿ ಬೇಡ! ಈ ದಿಶೆಯಲ್ಲಿ ತಂತ್ರವಿದ್ಯೆ ಅವನಿಗೆ ಸಕಲೇಷ್ಟಾರ್ಥಗಳನ್ನೂ ಧಿಡೀರನೆ ಪೂರೈಸುವ ಕಾಮಧೇನುವಾಗಿರುವಂತೆ ತೋರುತ್ತದೆ. ಫಲವಾಗಿ ಇಂದು ಮಾನವ ದುರಾಸೆಯೆಂಬ ಮಾರಿಗೌತಣವಾಗಿದ್ದಾನೆ, ಮತ್ತು ಮನಶ್ಶಾಂತಿ ಕಳೆದುಕೊಂಡಿದ್ದಾನೆ. ಅರ್ಥಾತ್ ಬದುಕು ಜಟಕಾಬಂಡಿ ಹಳಿದಪ್ಪಿದೆ. ಇದರ ದುಷ್ಫಲವಾಗಿ ಕೊಳ್ಳುಬಾಕ ಜೀವನಶೈಲಿ ಈಗ ಸರ್ವತ್ರ ಇಳೆಯನ್ನು ದಹಿಸುತ್ತಿದೆ, ಮಾನವ ಧನದಾಹಿಯಾಗಿ ಭೋಗಜೀವನದ ದಾಸನಾಗಿದ್ದಾನೆ. ಈ ಮನೋಭಾವಕ್ಕೆ ಅನುಭೋಗಾತಿರೇಕತ್ವ (consumerism) ಎಂದು ಹೆಸರು. ಇದನ್ನು ಸರಿಪಡಿಸುವುದು ಹೇಗೆ? ಯಾರು? ಸಂತ ಭದ್ರಗಿರಿ ಅಚ್ಯುತದಾಸರು ನೀಡಿದ ಒಂದು ನಿದರ್ಶನ ನೆನಪಿಗೆ ಬರುತ್ತದೆ.

ಪದಿಹರೆಯದ ಹುಡುಗನೊಬ್ಬ ಊರಿಗೆ ಬಂದಿದ್ದ ಸಂನ್ಯಾಸಿಯಲ್ಲಿಗೆ ಹೋಗಿ, ಎದೆಯುಬ್ಬಿಸಿ ನಿಂತು, "ಪೂಜ್ಯರೇ! ನಾನು ಯಾರಿಗೂ ಹೆದರುವವನಲ್ಲ" ಎಂದು ಘೋಷಿಸಿದ.

"ಭಲೇ ತಮ್ಮಾ! ಯಾರಿಗೂ ಅಂಜದಿರು, ತಲೆಯೆತ್ತಿ ನಡೆಯುತ್ತಿರು" ಎಂದರು ಆ ಪ್ರಶಾಂತ ಮೂರ್ತಿ.

ಇದರಿಂದ ಉತ್ತೇಜಿತನಾದ ಆತ, " ಪೂಜ್ಯರೇ! ನೀವು ನನಗೊಂದು ಸಂದೇಶ ನೀಡಬೇಕು" ಎಂದು ಕೋರಿದ.

ಅವರೆಂದರು, "ತಮ್ಮಾ! ನೀನು ಪ್ರತಿ ರಾತ್ರಿ ಕತ್ತೆತ್ತಿ ಬಾನನ್ನು ದಿಟ್ಟಿಸಿ ನೋಡುತ್ತಿರು."

ಯುವಕ ಈ ಆದೇಶವನ್ನು ನಿಷ್ಠೆಯಿಂದ ಪಾಲಿಸಿದ. ಕೆಲವೇ ಇರುಳುಗಳ ವೀಕ್ಷಣಾನಂತರ ಆತ ಅವರತ್ತ ಧಾವಿಸಿ, ಶಿರಬಾಗಿ ಮೃದುವಾಗಿ ಉಸುರಿದ, "ಪೂಜ್ಯರೇ! ಅದೆಂಥ ಎತ್ತರ, ಬಿತ್ತರ, ವೈವಿಧ್ಯ, ನಾನೆಂದೂ ಗ್ರಹಿಸಲಾಗದ ಅಪಾರ ವೈಭವ! ಆ ವ್ಯೋಮಸಾಗರದಲ್ಲಿ ನನಗೆ ಅಸ್ತಿತ್ವವೇ ಇಲ್ಲದಂಥ ಪರಿಸ್ಥಿತಿ. ಆದರೂ ಅದಕ್ಕೂ ನನಗೂ ಏನೋ ಜನ್ಮಾಂತರಗಳ ಸಂಬಂಧ ವಿದೆಯೋ ಎಂಬ ಭಾವ! "

"ತಮ್ಮಾ! ವಿನಯವೇ ಅರಿವಿನೆಡೆಗಿನ ಮೊದಲ ಹೆಜ್ಜೆ. ವಿನಯಶಾಲಿ ಶ್ರೀರಾಮನಿಗೆ ಶಿವಧನುಸ್ಸು ಒಲಿಯಿತು, ಗರ್ವಾಂಧ ರಾವಣನಿಗೆ ಅದು ಮುನಿಯಿತು. "

ನಮ್ಮ ಬದುಕಿನ ಶಾಂತಿಯ ಕೀಲಿ ಈ ಪುಟ್ಟ ಉಪಾಖ್ಯಾನದಲ್ಲಿ ಅಡಗಿದೆ. ಪ್ರಭುತ್ವ, ಧರ್ಮ ಮತ್ತು ವಿಜ್ಞಾನ ಪರಸ್ಪರ ಪೂರಕ ಪೋಷಕಗಳಾಗಿ ವರ್ತಿಸಿದಾಗ ಮಾತ್ರ ಜೀವನದಲ್ಲಿ ಶಾಂತಿ ಮೈದಳೆದೀತು. ಎಂದೇ ಈ ಮುಂದಿನ ಸೂತ್ರವಾಕ್ಯಗಳು:

ಧರ್ಮರಹಿತ ಪ್ರಭುತ್ವ ನಿರಂಕುಶತೆ, ಪ್ರಭುತ್ವರಹಿತ ಧರ್ಮ ಅವ್ಯವಹಾರಿಕತೆ; ಪ್ರಭುತ್ವರಹಿತ ವಿಜ್ಞಾನ ಚುಕ್ಕಾಣಿ ಕಳೆದ ದೋಣಿ, ವಿಜ್ಞಾನರಹಿತ ಪ್ರಭುತ್ವ ಅರಾಜಕತೆ; ವಿಜ್ಞಾನರಹಿತ

ಧರ್ಮ ಕುರುಡು, ಧರ್ಮರಹಿತ ವಿಜ್ಞಾನ ಕುಂಟು. ಧರ್ಮ–ಪ್ರಭುತ್ವ–ವಿಜ್ಞಾನಗಳ ಸಾಮರಸ್ಯವೇ ಋಜು ಜೀವನ ಸ್ವಾಸ್ಥ್ಯ ಮತ್ತು ಸೌಖ್ಯ.

ಇಂಥ ಪ್ರಜ್ಞೆ ವ್ಯಕ್ತಿಯ ಜೀವನಸೂತ್ರವಾದಾಗ, ಆದಾಗ ಮಾತ್ರ, ಆತ ವರ್ತಮಾನಯುಗದ ಮಹಾಪಿಡುಗಾಗಿ ಮನುಕುಲದ ಶ್ವಾಸಬಂಧಕ್ಕೆ ಕಾರಣವಾಗಿರುವ ಲಂಗುಲಗಾಮಿಲ್ಲದ ಅನುಭೋಗಶೈಲಿಗೆ ಅಥವಾ ಕೊಳ್ಳುಬಾಕ ಮನೋಭಾವಕ್ಕೆ ಕಡಿವಾಣ ತೊಡಿಸಬಲ್ಲ, ಮತ್ತು ಶಾಂತಿ ಗಳಿಸಬಲ್ಲ. ಬಾಳಿನಲ್ಲಿ ಸಪ್ತಶೀಲಗಳ ಪ್ರಾಮಾಣಿಕ ಅನುಷ್ಠಾನದಿಂದ ಇದು ಸಾಧ್ಯವಾಗುತ್ತದೆ.

## ಸಪ್ತ ಶೀಲಗಳು

ನಿಸರ್ಗದಲ್ಲಿ ಬಿಟ್ಟಿ ಕೂಳಿಲ್ಲ (there is no free lunch in nature) ಎಂಬುದೊಂದು ಅನುಭವಜನ್ಯ ನಿಯಮ. ಅಂದರೆ, ದುಡಿಮೆಯೇ ಬಾಳಿನ ಉಸಿರು. ವ್ಯಕ್ತಿ ತನ್ನ ಪಾಲಿಗೆ ಬಂದ ಅಥವಾ ತಾನೇ ಆಯ್ದುಕೊಳ್ಳುವ ದುಡಿಮೆ ಕುರಿತಂತೆ ಆತ ಮೊದಲು ತನ್ನನ್ನು ಪ್ರಶ್ನಿಸಿಕೊಳ್ಳಬೇಕು, ಈ ಹೊಣೆ ಹೊರಲು ನಾನು ಅರ್ಹನೇ? ಇದು ಸಾಮಾಜಿಕವಾಗಿ ಹಿತಕಾರಿಯೇ? ನೈತಿಕವಾಗಿ ಸಾಧುವೇ? ಅರ್ಹತೆ, ಮಾನವೀಯತೆ ಮತ್ತು ನೈತಿಕತೆ ಎಂಬ ಮೂರು ಪ್ರಾಥಮಿಕ ಪರೀಕ್ಷಣೆಗಳಲ್ಲಿ ಉತ್ತೀರ್ಣನಾದವ ಮುಂದೆ ಮಗ್ನತೆ, ಉತ್ಕೃಷ್ಟತೆ, ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಎಂಬ ನಾಲ್ಕು ತತ್ತ್ವಗಳ ಅನುಸಾರ ಸಾಧನೋದ್ಯುಕ್ತನಾಗಬೇಕು. ಇವುಗಳಿಗೆ ವಿವರಣೆ ಬೇಕೇ? ರಾಮಾಯಣ, ಮಹಾಭಾರತಾದಿ ಅಭಿಜಾತ ಕೃತಿಗಳನ್ನೂ ಶ್ರೀ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಮಹಾತ್ಮ ಗಾಂಧಿ, ಆಲ್ಬರ್ಟ್ ಐನ್‌ಸ್ಟೈನ್ ಮೊದಲಾದ ಯುಗಪುರುಷರ ಜೀವನ ಚರಿತ್ರೆಗಳನ್ನೂ ಅಧ್ಯಯನಮಾಡಿ ಸ್ಫೂರ್ತಿ ತಳೆಯಬೇಕು ಮತ್ತು ತದನುಸಾರ ಬಾಳಲು ಸತತ ಪ್ರಯತ್ನಶೀಲನಾಗಿರಬೇಕು. ಲಾಂಗ್‌ಫೆಲೋ ಕವಿಯ ಚಾಟೂಕ್ತಿ ಗಮನಿಸಿ:

ಉನ್ನತ ಸ್ಥಾನವನ್ನೇರಿಹ ವಿಭೂತಿ ಪುರು–
ಷರ್ ಛೋಂಕನೆಯೆ ಪಾರ್ದರಿಲ್ಲ ಗುರಿಗೆ
ನಿದ್ರಾಸಮಾಧಿಯೊಳ್ ಬಾಂಧವರ್ ಕೆಡೆದಿರಲ್
ಶ್ರಮಿಸಿಯೇರಿಹರು ಧ್ರುವತಾರೆಯೆಡೆಗೆ

ಶ್ರೀಮದ್ಭಗವದ್ಗೀತೆ ಕೂಡ ಒತ್ತಿ ಹೇಳುವುದು ಇದೇ ಅಂಶವನ್ನು.

ಯಾ ನಿಶಾ ಸರ್ವಭೂತಾನಾಂ
ತಸ್ಯಾಂ ಜಾಗರ್ತಿ ಸಂಯಮೀ ।
ಯಸ್ಯಾಂ ಜಾಗ್ರತಿ ಭೂತಾನಿ
ಸಾ ನಿಶಾ ಪಶ್ಯತೋ ಮುನೇಃ ॥

(ಶ್ರೀಮದ್ಭಗವದ್ಗೀತೆ ೨.೬೯)

## ಆದಾಯ ಏರಿಕೆಯೋ? ಶೀಲಸಂವರ್ಧನೆಯೋ?

ಅಧ್ಯಯನ, ಅಧ್ಯಾಪನ, ಪ್ರಯೋಗ ಮತ್ತು ಸ್ವಂತ ಜೀವನದಲ್ಲಿಯ ಆಚರಣೆಗಳಿಂದ ನಾನು ಕಂಡುಕೊಂಡಿರುವ ಸೂತ್ರಗಳಿವು:

**೧. ಸರಳ ಜೀವನ, ಗಹನ ಚಿಂತನ :** ಹಾಗೆಂದರೇನು? ನಿಸರ್ಗದ ಜೊತೆ ನೇರ ವರ್ತನೆಯಿಂದ ಇದು ಸಾಧಿತವಾಗುತ್ತದೆ. ಇಲ್ಲಿ ಯಂತ್ರೋಪಕರಣಗಳ ಅಂದರೆ ತಂತ್ರವಿದ್ಯೆಯ ಮೇಲಿನ ಅವಲಂಬನೆ ಕನಿಷ್ಠ, ಬದಲು, ಬುದ್ಧಿಪೂರ್ವಕವಾಗಿ ಅಂಗೋಪಾಂಗಗಳ ಉಪಯೋಗ ಗರಿಷ್ಠ.

**೨. ಪ್ರೀತಿ ಮತ್ತು ನೀತಿ ನಡುವೆ ಮಧುರ ಸಮತೋಲನ:** ಪ್ರೀತಿ ಎಂದರೆ ಅಂತಃಕರಣ, ದಯೆ. ದಯೆಯೇ ಧರ್ಮದ ಮೂಲವಯ್ಯಾ. ನೀತಿ ಎಂದರೆ ವರ್ತನಸಂಹಿತೆ. ಪತ್ನಿ ಅಹಲ್ಯೆಗೆ ಶಾಪವಿತ್ತ ಗೌತಮಋಷಿಯ ಕಠೋರ ವರ್ತನೆ ಪ್ರೀತಿರಿಕ್ತ ನೀತಿಗೂ ಧೃತರಾಷ್ಟ್ರನ ಅಂಧಮೋಹ ನೀತಿರಹಿತ ಪ್ರೀತಿಗೂ ಉದಾಹರಣೆಗಳು. ಪ್ರೀತಿಸೇಚಿತ ನೀತಿ, ಅಂತೆಯೇ, ನೀತಿ ನಿಯಂತ್ರಿತ ಪ್ರೀತಿ ಮಾತ್ರ ಶಾಂತಿಯುತ ಜೀವನದ ಭದ್ರ ಬುನಾದಿ ಆಗಬಲ್ಲವು.

೩. ಆಡಂಬರ, ಪ್ರದರ್ಶನ, ಡೌಲು ಮುಂತಾದ ಅಬ್ಬರಗಳಿಗೆ ಮರುಳಾಗದೆ ಪರೋಪಕಾರ, ಅಪರಿಗ್ರಹ, ಜೀವಕಾರುಣ್ಯ ಮುಂತಾದ ಉದ್ದೀಪಕ ಗುಣಗಳಿಗನುಸಾರವಾಗಿ ಬಾಳುವ ಜೀವನ ಶೈಲಿ.

೪. ಫಲಜ್ಯೋತಿಷ, ಮೂಢನಂಬಿಕೆಗಳು ಮತ್ತು ಆಚರಣೆಗಳು ಮುಂತಾದ ಸಾಮಾಜಿಕ ಪಿಡುಗುಗಳಿಂದ ಸದಾ ದೂರವಿರಬೇಕು.

ಸಾರಾಂಶವಿಷ್ಟು: ವ್ಯಕ್ತಿ ಸುಧಾರಿಸಿದ ಹೊರತು ಸಮಾಜ ಸುಧಾರಿಸದು. ಆ ದಿಶೆಯಲ್ಲಿ ಇಂದು ಪ್ರಪಂಚ ಸಾಗುತ್ತಿಲ್ಲ. ಗಾಂಧೀಯುಗದಲ್ಲಿ (ಸ್ವಾತಂತ್ರ್ಯಪೂರ್ವ ದಿನಗಳು) ದೇಶಪ್ರೇಮಕ್ಕೆ ಮೊದಲ ಮಣೆ, ಇದಕ್ಕೆ ಅಧೀನವಾಗಿ ವ್ಯಕ್ತಿಹಿತ ಎಂಬ ಭಾವನೆ ಮತ್ತು ಆಚರಣೆ ಜನಜೀವನವನ್ನು ರೂಪಿಸುತ್ತಿತ್ತು. ಸ್ವತಂತ್ರ ಭಾರತದ ಪ್ರಥಮ ಸರ್ಕಾರದ ವಕ್ತಾರರು ತಮ್ಮ ಧೋರಣೆಯನ್ನು ನಿರ್ಧರಿಸುವ ಸಂದರ್ಭದಲ್ಲಿ ಪ್ರಧಾನ ಮಂತ್ರಿ ಜವಾಹರಲಾಲ್ ನೆಹ್ರು, "ನಮ್ಮ ಸರ್ಕಾರದ ಧೋರಣೆ ರಾಷ್ಟ್ರದ ಸರಾಸರಿ ಆದಾಯವನ್ನು ವೃದ್ಧಿಸುವತ್ತ ಲಕ್ಷ್ಯ ಹರಿಸಬೇಕು" ಎಂಬ ವಾದವನ್ನು ಮಂಡಿಸಿದರು. ಸೋವಿಯತ್ ರಶ್ಯ ಮತ್ತು ಚೀನೀ ರಾಷ್ಟ್ರಗಳ ಹೊರತೋರಿಕೆಯ ಪ್ರಗತಿ ಮತ್ತು ಸುವ್ಯವಸ್ಥೆಗಳು ಅವರ ಚಿಂತನೆಯನ್ನು ಪ್ರಭಾವಿಸಿದ್ದುವು. ರಾಜಾಜಿ ಮಾತ್ರ, "ನಮ್ಮ ಧೋರಣೆ ಜನರ ಸರಾಸರಿ ಶೀಲವನ್ನು ವರ್ಧಿಸುವತ್ತ ಒತ್ತುಕೊಡಬೇಕು" ಎಂದು ವಾದಿಸಿದರು.

**ಆದಾಯ–ಶೀಲ:** ಯಾರು ಹಿತವರು ನಿಮಗೆ ಈ ಇಬ್ಬರೊಳಗೆ? ಅನುಷ್ಠಾನಕ್ಕೆ ಅತ್ಯಂತ ಸುಲಭವೂ ಎದ್ದು ಕಾಣುವ ವಿಧಾನವೂ ಆದ ಆದಾಯವೃದ್ಧಿಯತ್ತ ಮಂತ್ರಿಸಂಪುಟ ತನ್ನ ಒಲವನ್ನು

ಪ್ರದರ್ಶಿಸಿತು. ಫಲಿತಾಂಶ? ಋಣಂ ಕೃತ್ವಾ ಘೃತಂ ಪಿಬೇತ್ (ಸಾಲ ಮಾಡಿಯಾದರೂ ತುಪ್ಪ ತಿನ್ನು) ಎಂಬ ಚಾರ್ವಾಕ ನೀತಿಯ ಅಂಧ ಅನುಷ್ಠಾನ, ಕೃತಕ ಜೀವನದ ರಾವಣಾಟ್ಟಹಾಸ ಮತ್ತು ಭ್ರಷ್ಟಾಚಾರದ ರುದ್ರ ನರ್ತನ. ಮೊದಲು ರಾಷ್ಟ್ರೀಕರಣ, ಮುಂದೆ ಉದಾರೀಕರಣ, ಮತ್ತೆ ಈಗ ಜಾಗತೀಕರಣ ಎಂಬ ವ್ಯಕ್ತಿಶೋಷಕ ಜಿಗಣೆಗಳು ಸರಾಸರಿ ಆದಾಯ ಏರಿಕೆಯ ದುಷ್ಫಲಗಳು.

ಹೀಗಲ್ಲದೆ ಶೀಲವರ್ಧನೆಯತ್ತ – ಇದು ಸನಾತನ ಭಾರತೀಯ ಧ್ಯೇಯ ಧೋರಣೆಗಳಿಗನುಗುಣವಾಗಿಯೇ ಇದೆ (ಶೀಲಂ ಸರ್ವಸ್ಯ ಭೂಷಣಂ) – ಒತ್ತು ಕೊಟ್ಟಿದ್ದರೆ ನಮ್ಮ ದೇಶ ರಾಮರಾಜ್ಯವಾಗಿರುತ್ತಿತ್ತು ಎಂಬ ಸರಳ ತಥ್ಯ ಈಗ ಕೆಲವರಿಗಾದರೂ ಗೋಚರವಾಗುತ್ತಿರುವುದೊಂದು ಶುಭ ಲಕ್ಷಣ. ಆಗ ಕಾಯಕವೇ ಕೈಲಾಸ ಎಂಬ ಸೂಕ್ತಿ ವ್ಯಕ್ತಿಯ, ಆದ್ದರಿಂದ ಸಮಾಜದ, ಎಂದೇ ಸರ್ಕಾರದ ಜೀವನ ಶೈಲಿಯಾಗಿರುತ್ತಿತ್ತು, ಜೊತೆಯಲ್ಲೇ ರಾಷ್ಟ್ರೀಯ ವರಮಾನ ಏರಿರುತ್ತಿತ್ತು ಮತ್ತು ಸರ್ವತ್ರ ಸುಖ ಶಾಂತಿ ಪಸರಿಸಿರುತ್ತಿದ್ದುವು.

### ಕನ್‌ಫ್ಯೂಶಿಯಸ್ ವಾಣಿ

ಕ್ರಿಸ್ತಪೂರ್ವ ಸುಮಾರು ೫೫೧–೪೭೯ ಅವಧಿಯಲ್ಲಿ ಬಾಳಿದ ಚೀನೀ ತತ್ತ್ವಜ್ಞಾನಿ ಕನ್‌ಫ್ಯೂಶಿಯಸ್ ಬರೆದಿದ್ದಾನೆ, ನಮ್ಮ ಜಗದ್ಭವ್ಯ ಪ್ರಾಚೀನರು ಅತ್ಯುನ್ನತ ಸದ್ಗುಣಗಳನ್ನು ಸ್ಪಷ್ಟಪಡಿಸಿಕೊಳ್ಳಲು ಮತ್ತು ಪ್ರಪಂಚಾದ್ಯಂತ ಪ್ರಸಾರಗೈಯಲು ಬಯಸಿದಾಗ ತಮ್ಮ ರಾಜ್ಯಗಳಿಗೆ ಯುಕ್ತ ವ್ಯವಸ್ಥೆಯನ್ನು ಆವಾಹಿಸಿದರು. ರಾಜ್ಯಗಳಿಗೆ ಯುಕ್ತ ವ್ಯವಸ್ಥೆಯನ್ನು ಆವಾಹಿಸುವ ಮೊದಲು ತಮ್ಮ ಕುಟುಂಬಗಳನ್ನು ನಿಯಂತ್ರಿಸಿದರು. ಕುಟುಂಬಗಳನ್ನು ನಿಯಂತ್ರಿಸುವ ಮೊದಲು ತಮ್ಮನ್ನು ತಿದ್ದಿಕೊಂಡರು. ತಮ್ಮನ್ನು ತಿದ್ದಿಕೊಳ್ಳುವ ಮೊದಲು ಸ್ವಂತ ಆತ್ಮಗಳನ್ನು ಪರಿಪೂರ್ಣಗೊಳಿಸಿದರು. ಆತ್ಮಗಳನ್ನು ಪರಿಪೂರ್ಣಗೊಳಿಸುವ ಮೊದಲು ತಮ್ಮ ಚಿಂತನೆಗಳಲ್ಲಿ ನೈಷ್ಠಿಕರಾಗಿರಲು ಪ್ರಯತ್ನಿಸಿದರು. ಚಿಂತನೆಗಳಲ್ಲಿ ನೈಷ್ಠಿಕರಾಗಿರಲು ಪ್ರಯತ್ನಿಸುವ ಮೊದಲು ತಮ್ಮ ಜ್ಞಾನವನ್ನು ಗರಿಷ್ಠತೆಗೆ ವಿಸ್ತರಿಸಿದರು. ಜ್ಞಾನದ ಇಂಥ ಶೋಧನೆ ಎಂದರೆ ವಸ್ತುಗಳ ಶೋಧನೆ, ಮತ್ತು ಅವು ವಾಸ್ತವವಾಗಿ ಹೇಗಿದ್ದುವೋ ಹಾಗೆಯೇ ಅವನ್ನು ನೋಡುವುದು ಎಂದರ್ಥ. ವಸ್ತುಗಳನ್ನು ಹೀಗೆ ಶೋಧಿಸಿದಾಗ ಜ್ಞಾನ ಸಂಪೂರ್ಣವಾಯಿತು. ಜ್ಞಾನ ಸಂಪೂರ್ಣವಾದಾಗ ಚಿಂತನೆಗಳು ನೈಷ್ಠಿಕವಾದುವು. ಚಿಂತನೆಗಳು ನೈಷ್ಠಿಕವಾದಾಗ ಆತ್ಮಗಳು ಪರಿಪೂರ್ಣವಾದುವು. ಆತ್ಮಗಳು ಪರಿಪೂರ್ಣವಾದಾಗ ವ್ಯಕ್ತಿಗಳು ನೇರ್ಪುಗೊಂಡರು. ವ್ಯಕ್ತಿಗಳು ನೇರ್ಪುಗೊಂಡಾಗ ಕುಟುಂಬಗಳು ನಿಯಂತ್ರಿತವಾದುವು. ಕುಟುಂಬಗಳು ನಿಯಂತ್ರಿತವಾದಾಗ ರಾಜ್ಯಗಳು ಯುಕ್ತ ವ್ಯವಸ್ಥೆ ಪಡೆದುವು. ರಾಜ್ಯಗಳು ಯುಕ್ತ ವ್ಯವಸ್ಥೆ ಪಡೆದಾಗ ಸಮಸ್ತ ಪ್ರಪಂಚವೂ ಸುಖಶಾಂತಿಮಯವಾಯಿತು.

ವ್ಯಕ್ತಿ ನಿಸರ್ಗದೊಡನೆ ಸಮಶ್ರುತಿ ಸಮಗತಿಯಲ್ಲಿರುವಾಗ ಆತನ ಬದುಕಿನ ಉಸಿರು ಸುಖ ಶಾಂತಿ ಆಗಿರುವುದು, ಇರದಾಗ ಚಡಪಡಿಕೆ–ರೋಗ ಬಾಳ ಸಂಗಾತಿ ಆಗುತ್ತವೆ. ಇಂದಿನ ಅಶಾಂತಿ, ನಿಸರ್ಗದ ದರೋಡೆ, ಪರಿಸರಮಾಲಿನ್ಯ, ಅಸಹನೆ, ಅತೃಪ್ತಿ ಮುಂತಾದ ಜೀವಶೋಷಕಗಳ ಮೂಲವೇ ಇದು: ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ನಾವು ನಿಸರ್ಗದೂರವಾಗಿ ಕೃತಕ ಜೀವನ ನಡೆಸುತ್ತಿದ್ದೇವೆ. ಇಂಥಲ್ಲಿ ಶಾಂತಿ ಸುವ್ಯವಸ್ಥೆ ಗಗನ ಮರೀಚಿಕೆಗಳಾಗುವುದು ಸಹಜ. ನಿಸರ್ಗಸಮೀಪವಾಗಿ ನೀತಿಬದ್ಧ ಪ್ರೀತಿಯುಕ್ತ ಜೀವನ ನಡೆಸುವುದೊಂದೇ ಬಾಳಿನಲ್ಲಿ ನೆಮ್ಮದಿ ಗಳಿಸಲಿರುವ ರಾಜಮಾರ್ಗ.

### ಯಂತ್ರ ಯುಗದಲ್ಲಿ ಶಾಂತಿ ಮಂತ್ರ :

ಮುಂದಿನ ಮೂರು ಕಗ್ಗಗಳು ಇದೇ ಭಾವವನ್ನು ಸೂಚಿಸುತ್ತವೆ:

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ ||

ಅಪರಿಗ್ರಹದೊಳುಂಟು ಸಂತೋಷ ಸಂತೃಪ್ತಿ
ಸ್ವಪರಿಗ್ರಹದಲಿಲ್ಲ ನಿರ್ಮೋಹ ನಿರಸೂಯೆ
ನೃಪನಾತ ಧಾರಿಣಿಗೆ ಕೃಪನೀತ ಕೌರವಗೆ
ತಪನ ಪ್ರಕಾಶದೋಲ್ ಬಾಳೆಲೋ ಅತ್ರಿಸೂನು||

ಗುಡಿಸಲಿನ ಹಣತೆಯೊಳೊಲುಮೆ ತೈಲ, ನಗು ಬೆಳಕು.
ಸಡಗರದ ನಡಿಗೆಯೇ ಸಿಂಗಾರ. ನಭರೇಖೆ–
ಯೊಡೆವ ಸೌಧದಿ ಬಾಳು ಕೃತಕ, ಬಗೆ ಹೊಲಸು,
ನುಡಿ? ಒಡೆದ ಗಡಿಗೆಯ ಸಡಿಲ ಬಡಬಡಿಕೆ ಅತ್ರಿಸೂನು ||

### ಆಶ್ರಮದ ವಿಶೇಷ ಕಾರ್ಯಕ್ರಮಗಳು
ಜನವರಿ 2008

| | | |
|---|---|---|
| 1 | ಮಂಗಳವಾರ | ಕಲ್ಪತರು ದಿನಾಚರಣೆ |
| 4 | ಶುಕ್ರವಾರ | ಸ್ವಾಮಿ ಶಿವಾನಂದ ಜಯಂತಿ<br>ಏಕಾದಶಿ |
| 14 | ಸೋಮವಾರ | ಸ್ವಾಮಿ ಶಾರದಾನಂದ ಜಯಂತಿ |
| 18 | ಶುಕ್ರವಾರ | ಏಕಾದಶಿ |
| 21 | ಸೋಮವಾರ | ಸ್ವಾಮಿ ತುರೀಯಾನಂದ ಜಯಂತಿ |
| 29 | ಮಂಗಳವಾರ | ಸ್ವಾಮಿ ವಿವೇಕಾನಂದ ಜಯಂತಿ |

ಮೈಸೂರು ಆಶ್ರಮದ ಸಭಾಂಗಣದಲ್ಲಿ ಶನಿವಾರ ಇಂಗ್ಲೀಷಿನಲ್ಲಿಯೂ ಭಾನುವಾರ ಕನ್ನಡದಲ್ಲಿಯೂ ಸಂಜೆ 6.00ರಿಂದ 7.00 ರವರೆಗೆ ಪ್ರವಚನಗಳು ನಡೆಯುತ್ತವೆ. ಎಲ್ಲರಿಗೂ ಸುಸ್ವಾಗತ